JANUARY 17, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಕೇಂದ್ರ ಪುರಸ್ಕೃತ, 6 ಕೋಟಿ 80 ಲಕ್ಷ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ ಸ್ಥಾಪನೆ; ದೇಶಾದ್ಯಂತ 28 ಕೋಟಿ ಯುವಜನರಿಗೆ, ಉದ್ಯೋಗ ಸೃಷ್ಟಿ.

'ಧಾರವಾಡ ಸಂಸದರ ಕ್ರೀಡಾ ಮಹೋತ್ಸವ'; ಗರಗ, ಹಂಗರಕಿ ಗ್ರಾಮದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಚಾಲನೆ.

ಶಿರೂರು ಪರ್ಯಾಯೋತ್ಸವ; ಇಂದು ಮತ್ತು ನಾಳೆ, ಉಡುಪಿಯ ಶ್ರೀಕೃಷ್ಣ ಮಠದಲ್ಲಿ, ವಿಶೇಷ ಸಂಭ್ರಮ.

ಸ್ವಾತಂತ್ರ್ಯ ಹೋರಾಟಗಾರ, ಮುತ್ಸದ್ದಿ ಭೀಮಣ್ಣ ಖಂಡ್ರೆ ನಿಧನ; ಇಂದು ಸಂಜೆ, ಬೀದರ ಜಿಲ್ಲೆ ಭಾಲ್ಕಿಯಲ್ಲಿ, ಅಂತ್ಯಕ್ರಿಯೆ; ಗಣ್ಯರ ಕಂಬನಿ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯಪಾಲ ಥಾವರಚಂದ ಗೆಹ್ಲೋಟ, ಗುರುವಾರ, 22 ರಂದು ಬೆಳಗ್ಗೆ 11 ಗಂಟೆಗೆ ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ, ವಿಧಾನಸಭೆಯ ಸಭಾಂಗಣದಲ್ಲಿ, ಭಾ ಣ ಮಾಡಲಿದ್ದಾರೆ ಎಂದು, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

<><><>

ದೇಶದಲ್ಲಿ 6 ಕೋಟಿ 80 ಲಕ್ಷ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನೋಂದಣಿಯಾಗಿದ್ದು, 28 ಕೋಟಿಗೂ ಅಧಿಕ ಯುವಜನರಿಗೆ ಉದ್ಯೋಗ ಒದಗಿಸಿವೆ ಎಂದು, ಶಿವಮೊಗ್ಗ ಜಿಲ್ಲೆ, ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಪಿ. ಗೋಪಿನಾಥ ತಿಳಿಸಿದ್ದಾರೆ. ಶಿವಮೊಗ್ಗದ ಶಾಂತಲಾ ಸ್ಪೆರೊಕ್ಯಾಸ್ಟ್ ಸಭಾಂಗಣದಲ್ಲಿ, ಎಂ.ಎಸ್.ಎಂ.ಇ ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಿ, ವೇಗ ವರ್ಧಿಸಲು, ಆರ್.ಎಂ.ಪಿ ಯೋಜನೆಯಡಿ, 'ನೋ ಯುರ್ ಎಂ.ಎಸ್.ಎಂ.ಇ ಇಕೊ ಸಿಸ್ಟಂ', ಕಾರ್ಯಾಗಾರದಲ್ಲಿ, ಅವರು ಮಾತನಾಡಿದರು. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ದೇಶದ ಜಿ.ಡಿ.ಪಿ.ಗೆ ಶೇಕಡ 30 ರಷ್ಟು ಕೊಡುಗೆ ನೀಡುತ್ತಿವೆ.

ಎಂ.ಎಸ್.ಎಂ.ಇ ಗಳಿಗೆ ಉದ್ಯಮ್ ನೋಂದಣಿ ಕಡ್ಡಾಯವಾಗಿದ್ದು, ಸರ್ಕಾರಿ ಯೋಜನೆಗಳ ಲಾಭ ಪಡೆಯಲು ಅನುಕೂಲವಾಗುತ್ತದೆ ಎಂದರು.

<><><>

ವಿಕಸಿತ ಭಾರತ, ಜಿ ರಾಮ್ ಜಿ ಯೋಜನೆ, ಪಾರದರ್ಶಕತೆ ಜೊತೆಗೆ, ಭ್ರ  ಷ್ಟಾಚಾರ ನಿಯಂತ್ರಿಸುವಲ್ಲಿ, ಮಹತ್ವದ ಹೆಜ್ಜೆಯಾಗಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಖಾತೆ ಸಚಿವ ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ವಿ.ಬಿ. ಜಿ ರಾಮ್ ಜಿ ಯೋಜನೆ, ಗ್ರಾಮೀಣ ಕೂಲಿ ಕಾರ್ಮಿಕರಿಗೆ, ವರ್ಷದಲ್ಲಿ 125 ದಿನಗಳ ಉದ್ಯೋಗ ಖಾತ್ರಿ ನೀಡಲಿದೆ. ಕೃತಕ ಬುದ್ಧಿಮತ್ತೆ ಆಧರಿತ ಮೇಲ್ವಿಚಾರಣೆ, ಬಯೋಮೆಟ್ರಿಕ್ ಹಾಜರಾತಿ, ಡಿಜಿಟಲ್ ಲೆಕ್ಕ ಪರಿಶೋಧನೆ ಮೂಲಕ, ಪಾರದರ್ಶಕತೆ, ಖಾತ್ರಿ ಪಡಿಸುವುದು ಎಂದಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ನೂತನ ವಂದೇ ಭಾರತ ಹಾಗೂ ಅಮೃತ ಭಾರತ ರೈಲು ಸೇವೆಗಳು ಸೇರಿದಂತೆ, 4 ಸಾವಿರ ಕೋಟಿ ರೂಪಾಯಿಗಳ ವಿವಿಧ ಯೋಜನೆಗಳಿಗೆ, ಇಂದು ಪಶ್ಚಿಮ ಬಂಗಾಳದಲ್ಲಿ ಚಾಲನೆ ನೀಡಲಿದ್ದಾರೆ. ಪಶ್ಚಿಮ ಬಂಗಾಳದ ಅಲಿಪುರ ದೌರ ದಿಂದ ಬೆಂಗಳೂರಿನ ಸರ್.ಎಂ. ವಿಶ್ವೇಶ್ವರಾಯ ಟರ್ಮಿನಲ್‌ಗೆ ಸಂಪರ್ಕ ಕಲ್ಪಿಸುವ, ಅಮೃತ ಭಾರತ ರೈಲು ಹಾಗೂ ಬಾಲುರ ಘಾಟ್ – ಸರ್ ಎಂ.ವಿ ಟರ್ಮಿನಲ್ ಬೆಂಗಳೂರು ಎಕ್ಸಪ್ರೆಸ್ ರೈಲು ಸೇವೆಗೂ, ಪ್ರಧಾನಮಂತ್ರಿ ಹಸಿರು ಧ್ವಜ ತೋರಲಿದ್ದಾರೆ.

<><><>

ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಸಚಿವ, ಮುತ್ಸದ್ದಿ ಭೀಮಣ್ಣ ಖಂಡ್ರೆ ಬೀದರ ಜಿಲ್ಲೆ ಭಾಲ್ಕಿಯ ತಮ್ಮ ಸ್ವ ಗೃಹದಲ್ಲಿ, ರಾತ್ರಿ 10.50 ಕ್ಕೆ ನಿಧನರಾದರು. ಅವರಿಗೆ 102 ವರ್ಷ ವಯಸ್ಸಾಗಿತ್ತು. 1962 ರಲ್ಲಿ ಮೊದಲ ಬಾರಿಗೆ, ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದ ಭೀಮಣ್ಣ ಖಂಡ್ರೆ ಅವರು, 4 ಬಾರಿ ಶಾಸಕರಾಗಿ, 2 ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ಎಂ.ವೀರಪ್ಪ ಮೊಯಿಲಿ ಅವರ ಸಚಿವ ಸಂಪುಟದಲ್ಲಿ, ಸಾರಿಗೆ ಖಾತೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಂತಾಪ ಸೂಚಿಸಿ, ಮಹಾತ್ಮ ಗಾಂಧಿ ಅವರ ಅನುಯಾಯಿಯಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ, ಭೀಮಣ್ಣ ಖಂಡ್ರೆ ಅವರು, ಕರ್ನಾಟಕ ಏಕೀಕರಣ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದವರು. ಅವರ ಬದುಕಿನ ಹೆಜ್ಜೆಗಳು, ನಾಡಿನ ಮಣ್ಣಿನಲ್ಲಿ ಚಿರಸ್ಥಾಯಿ, ಎಂದು ಕಂಬನಿ ಮಿಡಿದಿದ್ದಾರೆ. ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಬೀದರ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಅಮರಕುಮಾರ ಖಂಡ್ರೆ ಸೇರಿದಂತೆ, ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು, ಅಪಾರ ಬಂಧು ಬಳಗ ಅವರಿಗೆ ಇದ್ದಾರೆ. ಭಾಲ್ಕಿಯ ಗಾಂಧಿ ಗಂಜ್ ನ, ಭೀಮಣ್ಣ ಖಂಡ್ರೆ ಅವರ ಮನೆಯಲ್ಲಿ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಸಾರ್ವಜನಿಕರಿಗೆ, ಅವಕಾಶ ಕಲ್ಪಿಸಲಾಗಿದೆ. ಇಂದು ಸಂಜೆ 5 ಗಂಟೆಗೆ, ಭಾಲ್ಕಿಯ ಚಿಕಲ್‌ಚಂದ ರಸ್ತೆಯ, ಶಾಂತಿ ಧಾಮದಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯದಂತೆ, ಅಂತಿಮ ವಿಧಿ ವಿಧಾನಗಳು ನೆರವೇರಲಿವೆ ಎಂದು, ಅವರ ಪುತ್ರ ಈಶ್ವರ ಖಂಡ್ರೆ ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉಡುಪಿ ಶಿರೂರು ಮಠಾಧೀಶ, ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ಪ್ರಥಮ ಪರ್ಯಾಯ ಮಹೋತ್ಸವದ ಸರ್ವ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು, ಪರ್ಯಾಯ ಸ್ವಾಗತ ಸಮಿತಿ ಅಧ್ಯಕ್ಷ ಯಶಪಾಲ ಸುವರ್ಣ ತಿಳಿಸಿದ್ದಾರೆ. ಚತುರ್ಥ ಪರ್ಯಾಯ ಮಹೋತ್ಸವವನ್ನು ಯಶಸ್ವಿಯಾಗಿ ಪೂರೈಸಿದ, ಪರ್ಯಾಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹಾಗೂ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರಿಗೆ, ಇಂದು ಸಂಜೆ 4.30 ಕ್ಕೆ, ರಥಬೀದಿಯ ಪೂರ್ಣ ಪ್ರಜ್ಞಾ ವೇದಿಕೆಯಲ್ಲಿ ಗೌರವ ಅರ್ಪಿಸಲಾಗುವುದು, ಎಂದರು.

<><><>

ನಾಳೆ ಮುಂಜಾವಿನ 2 ಗಂಟೆಗೆ, ಉಡುಪಿ ಜೋಡುಕಟ್ಟೆಯಿಂದ ಶ್ರೀ ಕೃ ್ಣ ಮಠಕ್ಕೆ ವೈಭವದ ಪರ್ಯಾಯ ಮೆರವಣಿಗೆ ಸಾಗಿ ಬರಲಿದೆ. 2 ಲಕ್ಷಕ್ಕೂ ಅಧಿಕ ಭಕ್ತರು ಪರ್ಯಾಯ ಮಹೋತ್ಸವದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ. ವಿವಿಧ ರಾಜ್ಯಗಳ 85ಕ್ಕೂ ಅಧಿಕ ಕಲಾ ತಂಡಗಳು, ಆಕ ್ಷಕ ಸ್ತಬ್ಧ ಚಿತ್ರಗಳು, ಮೆರವಣಿಗೆಯಲ್ಲಿ ಕಾಣಸಿಗಲಿವೆ.

<><><>

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ, ರಾಜ್ಯ ಸಚಿವ ಸುರೇಶ ಗೋಪಿ ಹಾಗೂ ಕುಟುಂಬ, ಉಡುಪಿ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ, ದರ್ಶನ ಪಡೆದರು.

<><><>

ರಾಷ್ಟ್ರ ಮಟ್ಟದ ಹಾಗೂ ಅಂತಾರಾಷ್ಟ್ರೀಯ ಸ್ಥರದ, ಕ್ರೀಡಾಕೂಟಗಳಲ್ಲಿ ಅತ್ಯುತ್ತಮ ಹಾಗೂ ಗಣನೀಯ ಸಾಧನೆಗೈದ ಕ್ರೀಡಾಪಟುಗಳಿಗೆ, ಪೊಲೀಸ್ ಇಲಾಖೆಯಲ್ಲಿ ಶೇಕಡ 3ರಷ್ಟು ಹಾಗೂ ಉಳಿದ ಇಲಾಖೆಗಳಲ್ಲಿ, ಶೇಕಡ 2ರಷ್ಟು ಸರ್ಕಾರಿ ಉದ್ಯೋಗಗಳನ್ನು ಮಿಸಲಿಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ತುಮಕೂರಿನ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ, ನಿನ್ನೆ ಆರಂಭಗೊಂಡ, ಗುರುವಾರ 22ರ ವರೆಗೆ ನಡೆಯಲಿರುವ, ಕರ್ನಾಟಕ ಒಲಿಂಪಿಕ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ, ಮುಖ್ಯಮಂತ್ರಿ ಮಾತನಾಡಿದರು.

<><><>

ಸಿದ್ದರಾಮಯ್ಯ ಧ್ವನಿ 45 ಸೆಕೆಂದುಗಳು

<><><>

'ಧಾರವಾಡ ಸಂಸದರ ಕ್ರೀಡಾ ಮಹೋತ್ಸವ' ಕ್ಕೆ, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ, ಗರಗ– ಹಂಗರಕಿ ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕ್ರೀಡಾಂಗಣದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ, ಸಂಸದರ ಕ್ರೀಡಾ ಮಹೋತ್ಸವ, 'ಜನ ಚಳವಳಿ'ಯಾಗಿದ್ದು, ಗ್ರಾಮೀಣ ಯುವಜನತೆ ಗ್ಳಿಮ್ಮ ಕ್ರೀಡಾ ಪ್ರತಿಭೆ ಪ್ರದರ್ಶಿಸಲು, ವೇದಿಕೆ ಒದಗಿಸಲಾಗುತ್ತಿದೆ. ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ, ರಾಷ್ಟ್ರ ಮಟ್ಟದ ವೇದಿಕೆ ಕಲ್ಪಿಸುವುದು, ಅಭಿಯಾನದ ಮುಖ್ಯ ಉದ್ದೇಶ ಎಂದರು.

<><><>

ದಕ್ಷಿಣಕನ್ನಡ ಜಿಲ್ಲೆ, ಮೂಡ ಬಿದಿರೆಯ, ಆಳ್ವಾಸ್ ಸ್ವರಾಜ್ ಮೈದಾನದಲ್ಲಿ, ನಿನ್ನೆ ಸಮಾರೋಪಗೊಂಡ, ಅಖಿಲ ಭಾರತ, 85ನೇ ಅಂತರ್ ವಿಶ್ವವಿದ್ಯಾಲಯಗಳ, ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ, ನಾಲ್ಕು ನೂರು ಮೀಟರ್ ರಿಲೇಯಲ್ಲಿ, ಚೆನ್ನೈನ ಮದ್ರಾಸ ವಿಶ್ವವಿದ್ಯಾಲಯದ ಅಥ್ಲೀಟ್‌ಗಳ ತಂಡ, 40 ದಶಾಂಶ 6–9 ಸೆಕೆಂದುಗಳಲ್ಲಿ, ಗುರಿ ತಲುಪಿ, ಚಿನ್ನಕ್ಕೆ ಕೊರಳೊಡ್ಡಿತು. ರಾಯಚೂರಿನ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಅಥ್ಲೀಟ್‌ಗಳ ತಂಡ, 41 ದಶಾಂಶ 0–2 ಸೆಕೆಂದುಗಳಲ್ಲಿ ಗುರಿ ತಲುಪಿ, ದ್ವಿತೀಯ ಸ್ಥಾನದೊಂದಿಗೆ, ಬೆಳ್ಳಿ ಪದಕ ಗೆದ್ದಿತು. ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯದ ಓಟಗಾರರ ತಂಡ, 41 ದಶಾಂಶ 0–4 ಸೆಕೆಂದುಗಳಲ್ಲಿ ಗುರಿ ತಲುಪಿ, ಕಂಚಿನ ಪದಕ ಜಯಿಸಿತು.

<><><>

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, 2026–27ನೇ ಸಾಲಿಗೆ, ಕ್ರೀಡಾ ಶಾಲೆ ಹಾಗೂ ಕ್ರೀಡಾ ನಿಲಯಗಳಿಗೆ, ಕ್ರೀಡಾಪಟುಗಳನ್ನು ಆಯ್ಕೆ ಮಾಡಲು, ಇಂದಿನಿಂದ, 22ರ ವರೆಗೆ, ಬೆಳಗ್ಗೆ 10 ಗಂಟೆಯಿಂದ, ಕಲಬುರಗಿ ಜಿಲ್ಲೆಯ, ಎಲ್ಲ ತಾಲೂಕು ಕೇಂದ್ರಗಳಲ್ಲಿ, ಆಯ್ಕೆ ಪರೀಕ್ಷೆ ನಡೆಯಲಿದೆ. 4ನೇ ತರಗತಿ ಓದುತ್ತಿರುವ ಕ್ರೀಡಾಪಟುಗಳಿಗೆ, ಅಥ್ಲೆಟಿಕ್ಸ್ ಮತ್ತು ಹಾಕಿ ಹಾಗೂ 7ನೇ ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಕ್ರೀಡಾಪಟುಗಳಿಗೆ, ಅಥ್ಲೆಟಿಕ್ಸ್, ಹಾಕಿ, ಬಾಸ್ಕೆಟ್‌ಬಾಲ್, ವಾಲಿಬಾಲ್, ಕುಸ್ತಿ, ಜೂಡೋ, ಫುಟಬಾಲ್ ಹಾಗೂ ಜಿಮ್ನಾಸ್ಟಿಕ್ಸ್ ತಂಡಗಳಿಗೆ ಆಯ್ಕೆ ಜರುಗಲಿದೆ

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕೇಂದ್ರ ಪುರಸ್ಕೃತ, 6 ಕೋಟಿ 80 ಲಕ್ಷ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ ಸ್ಥಾಪನೆ; ದೇಶಾದ್ಯಂತ 28 ಕೋಟಿ ಯುವಜನರಿಗೆ, ಉದ್ಯೋಗ ಸೃಷ್ಟಿ.

'ಧಾರವಾಡ ಸಂಸದರ ಕ್ರೀಡಾ ಮಹೋತ್ಸವ'; ಗರಗ, ಹಂಗರಕಿ ಗ್ರಾಮದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಚಾಲನೆ.

ಶಿರೂರು ಪರ್ಯಾಯೋತ್ಸವ; ಇಂದು ಮತ್ತು ನಾಳೆ, ಉಡುಪಿಯ ಶ್ರೀಕೃಷ್ಣ ಮಠದಲ್ಲಿ, ವಿಶೇಷ ಸಂಭ್ರಮ.

ಸ್ವಾತಂತ್ರ್ಯ ಹೋರಾಟಗಾರ, ಮುತ್ಸದ್ದಿ ಭೀಮಣ್ಣ ಖಂಡ್ರೆ ನಿಧನ; ಇಂದು ಸಂಜೆ, ಬೀದರ ಜಿಲ್ಲೆ ಭಾಲ್ಕಿಯಲ್ಲಿ, ಅಂತ್ಯಕ್ರಿಯೆ; ಗಣ್ಯರ ಕಂಬನಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>